**ವ್ಯಾಖ್ಯಾನ**

## <u>ಹತ್ತು ಗೋದಾನ ಸಮವು ಹರ ವಾಹನ</u>

ಉಗಾಭೋಗದ ಚಿಂತನೆ:

**ಹತ್ತು ಗೋದಾನ ಸಮವು ಹರ ವಾಹನ ವೃಷೋತ್ಸರ್ಜನ**
**ಹತ್ತು ವೃಷಗಳಿಗೆ ಸಮ ಹಾರುವ ಕುದುರೆಯ ದಾನ ಕಾಣಿರೊ**
**ಹತ್ತು ಕುದುರೆಗಳಿಗೆ ಸಮ ಹಸ್ತಿಯ ದಾನ ಕಾಣಿರೊ**
**ಹತ್ತಾನೆಯ ಸಮ ಕ್ರತು**
**ಹತ್ತು ಕ್ರತುವಿಗೆ ಸಮ ಹರಿ ಭಕ್ತಗೆ ಕನ್ಯಾದಾನ**
**ಹತ್ತು ಕನ್ಯಾದಾನ ಸಮವು ಹಲವು ಜನಕೆ ಉದಕ ದಾನ**
**ಹತ್ತು ಉದಕ ದಾನಕೆ ಸಮ ಹಸಿದವಗೆ ಅನ್ನ ದಾನ**
**ನಿತ್ಯ ಪುರಂದರ ವಿಠಲನ ನೆನೆಯುತ ಪುಣ್ಯಕೆಣೆಯಿಲ್ಲವಯ್ಯ**

ಈ ಉಗಾಭೋಗದಲ್ಲಿ ಶ್ರೀ ಪುರಂದರ ದಾಸರು ದಾನದಲ್ಲಿನ ತಾರತಮ್ಯವನ್ನು ತಿಳಿಸಿದ್ದಾರೆ.

ಗೋದಾನಕ್ಕಿಂತ ವೃಷಭದಾನ ಶ್ರೇಷ್ಟ ಹೀಗೆ ಹೇಳುತ್ತ ಅನ್ನದಾನ ಶ್ರೇಷ್ಟ, ಅದಕ್ಕಿಂತಲೂ ನೀರಿನ ದಾನ ಶ್ರೇಷ್ಟ ಎಂದು ಹೇಳಿದ್ದಾರೆ.

ನೀರು ಸಾಮಾನ್ಯವಾಗಿ ಎಲ್ಲಕಡೆ ಲಭ್ಯವಿರುತ್ತದೆ.  ಅದರ ದಾನ ಮಹತ್ವದ್ದಲ್ಲ ಎನ್ನುವಂತಿಲ್ಲ.

ರುದ್ರುದೇವರು ಅನ್ನಾಭಿಮಾನಿಗಳಾದರೆ,

ನೀರಿನಲ್ಲಿ ವಾಯುದೇವರ ಸನ್ನಿಧಾನವಿರುತ್ತದೆ.

**ತೇಜೋ$ಭಿಮಾನಿನಿ ಲಕ್ಷ್ಮೀ ಪ್ರಾಣಸ್ತಬಭಿಮಾನವಾನ್ /**

**ಅನ್ನಾಭಿಮಾನಿ ರುದ್ರುಸ್ಯ ತ್ರಿಸ್ತಾ ದೇವತಾ:ಪುರಾ// (ಬ್ರಹ್ಮಾಂಡ ಪುರಾಣ)**

ನೀರಿನಿಂದಲೇ ಪ್ರಾಣ.

ಉಸಿರಾಟದ ನಂತರ ಜೀವರಿಗೆ ಬದುಕಲು ಅತೀ ಅವಶ್ಯ ಬೇಕಾದದ್ದು ನೀರು.

ಬೇಕಾದಷ್ಟು ಹೋಮ ಹವನ ಮಾಡಿ, ಗೋದಾನಾದಿಗಳನ್ನು ಮಾಡಿದ ಶ್ವೇತರಾಜ ಅನ್ನ ನೀರು ದಾನ ಮಾಡದೇ ಸ್ವರ್ಗದಲ್ಲಿದ್ದರೂ ಹಸಿವಿನ ಬಾಧೆ ತಾಳದೇ ತನ್ನ ದೇಹದ ಮಾಂಸವನ್ನು ತಾನೇ ತಿನ್ನುವ ದಾರುಣ ಸ್ಥಿತಿ ಅನುಭವಿಸಿದ ಕಥೆ ರಾಮಾಯಣದಲ್ಲಿದೆ.

ದಾನದಲ್ಲಿಯ ಮೂರುವಿಧ ಎನ್ನುತ್ತಾನೆ ಶ್ರೀ ಕೃಷ್ಣ ಗೀತೆಯಲ್ಲಿ.

ಸತ್ಪಾತ್ರರಿಗೆ ಅವರ ಸದ್ವಿನಿಯೋಗಕ್ಕೆ ಬರುವ ವಸ್ತುಗಳನ್ನು ದೇವರು ಪ್ರೀತನಾಗಲಿ ಎಂದು ಕೊಟ್ಟ, ದಾನ ಸಾತ್ವಿಕ ದಾನ. ಇದು ಸಾಧನೆಗೆ ಅಡ್ಡಿಯಾದ ತ್ರಿಕರಣಗಳಿಂದ ಮಾಡಿದ ಪಾಪಗಳನ್ನು ಕಳೆದು, ಅಂಥಕರಣ ಶುದ್ದಿದ್ವಾರ್ ಜ್ಞಾನ ಸಾಧನೆ ಮಾಡಿಸಿ ಮೋಕ್ಷಕ್ಕೆ ಕಾರಣವಾಗುತ್ತದೆ.

ಆದ್ದರಿಂದ ದಾನದ ತಾರತಮ್ಯ ತಿಳಿದು, ದೇಶ ಕಾಲಕ್ಕನುಗುಣವಾಗಿ ಸತ್ಪಾತ್ರರರಿಗೆ ದಾನ ಮಾಡಬೇಕು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ